# ಇಲ್ಲಿಯವರೆಗೆ



ಕ್ಷುದ್ರಶಕ್ತಿಗಳಿಗೆ ರಕ್ತತರ್ಪಣ ಕೊಟ್ಟ ಬಳಿಕ ಸ್ಮಶಾನದಿಂದ ರುದ್ರನಾಗ ಮನೆಗೆ ಬರುತ್ತಾನೆ. ಎಲ್ಲ ಕಡೆ ಹುಡುಕಾಡುತ್ತಾನೆ. ತಂಗಿ ಮತ್ತವಳ ಗಂಡ ಮನೆಯಲ್ಲಿ ಇರುವುದಿಲ್ಲ. ಕೋಪದಿಂದ ಹಲ್ಲುಕಡಿಯುತ್ತಾನೆ. ತನ್ನ ಮಡದಿ ಮಕ್ಕಳನ್ನು ಕೈಯಾರೆ ಕೊಲ್ಲಿಸುವಂತೆ ಮಾಡಿದ ಮನೋಹರ ಏಕೆ ಹಾಗೆ ಮಾಡಿದ ಎಂಬುದು ಅವನಿಗೇ ಅರ್ಥವಾಗುತ್ತಿಲ್ಲ. ಈ ಮಧ್ಯೆ ತೋಳ ಅರುಂಧತಿ ಮಗುವನ್ನು ಎತ್ತಿಕೊಂಡು ಹೋಗಿದ್ದನ್ನು ಮದಂತ ಜೋಪಾನವಾಗಿ ಕಾಪಾಡುತ್ತಾನೆ. ಆ ಮಗುವಿನ ಕಡೆಗೆ ರುದ್ರನಾಗನ ಕಣ್ಣು ಹೊರಳುತ್ತದೆ. ಹೆಣ್ಣು ಮಗುವಿನಲ್ಲಿ ತನ್ನ ತಂಗಿಯ ಹೋಲಿಕೆ ಇದೆ ಎಂಬುದನ್ನು ಗುರುತಿಸುತ್ತಾನೆ.

ಅರುಂಧತಿ ತನ್ನ ಕಣ್ಣು ಬಿಡುತ್ತಾಳೆ, ಮಗು ಕಾಣಿಸುತ್ತಿಲ್ಲ. ಮನೋಹರ ದುಃಖದಿಂದ ಕುಳಿತಿದ್ದ. ರುದ್ರನಾಗ ಕೋಪದಿಂದ ಮಂತ್ರಶಕ್ತಿಯನ್ನು ತನ್ನ ಮೇಲೆ ಪ್ರಯೋಗ ಮಾಡಿದರೆ ಎಂಬ ಭಯ ಮನೋಹರನನ್ನು ಕಾಡುತ್ತದೆ. ರುದ್ರನಾಗನಿಗೆ ಕೋಪ, ರೋಷ ಪರಾಕಾಷ್ಠೆಗೇರುತ್ತದೆ. ತನ್ನ ಹೆಂಡತಿ ಮಕ್ಕಳು ಸತ್ತ ಹಾಗೇ ರಕ್ತಕಾರಿಕೊಂಡು ಮನೋಹರ ಕೂಡ ಸಾಯಬೇಕು ಎಂಬ ನಿರ್ಧಾರ ಮಾಡುತ್ತಾನೆ.

ಅರುಂಧತಿ ತವರು ಮನೆಗೆ ಹೋಗಬಯಸುತ್ತಾಳೆ. ಮನೋಹರ ತನ್ನ ಕೋಟ್ಯಂತರ ರೂಪಾಯಿ ಬೆಲೆಬಾಳುವ ಆಸ್ತಿ ಮಾರಿ ಪಾಸ್‌ಪೋರ್ಟ್ ಸಿದ್ಧಪಡಿಸಿ ಅಮೇರಿಕಕ್ಕೆ ಹೋಗುವ ಬಗ್ಗೆ ಚಿಂತನೆ ನಡೆಸುತ್ತಾನೆ. ರುದ್ರನಾಗ ಸೇಡು ತೀರಿಸುವ ಭರದಲ್ಲಿ ಮದಂತನ ಬಳಿ ಹೋಗಿ ಗುರುದಕ್ಷಿಣೆ ನೀಡುವಂತೆ ಕೇಳುತ್ತಾನೆ. ಏನು ಕೊಡಲಿ ಎಂದು ಮದಂತ ಹೇಳಿದಾಗ ಅರುಂಧತಿಯ ಮಗುವಿಗೆ ಮಾಂತ್ರಿಕ ವಿದ್ಯೆ ಕಲಿಸಬೇಕು, ನಿನ್ನ ಕೈಯಿಂದಲೇ ಇವರಿಗೆಲ್ಲ ಕೈಕರಣ ಮಾಡಬೇಕು ಎಂದಾಗ ಮದಂತ ಗುರುವಿನ ಮಾತಿಗೆ ಒಪ್ಪದೆ ಇನ್ನು ಮುಂದೆ ಕ್ಷುದ್ರಶಕ್ತಿಗಳಿಗೆ ತರ್ಪಣ ಕೊಡುವುದಾಗಲಿ, ಕೈಕರಣ ಮಾಡುವುದಾಗಲಿ ನನ್ನಿಂದಾಗದು ಎನ್ನುತ್ತಾನೆ. ಇದರಿಂದ ರುದ್ರನಾಗನ ಕೋಪ ನೆತ್ತಿಗೇರುತ್ತದೆ. ಅರುಂಧತಿ ಮಗಳು ಮಲ್ಲಿಗೆಗೆ ಈಗ ಹದಿನಾರರ ಹರೆಯ. ಸುಂದರ ರೂಪದ ಹೆಣ್ಣುಮಗಳು. ಅವಳ ಮನೆಗೆ ಸಾರಾಯಿ ಕಾಂಟ್ರಾಕ್ಟರ್ ನರಸಣ್ಣ ಬಂದು ತೋಟದ ಬಾವಿಗೆ ಹೋಗಿ ಈಜಾಡೋಣ ಎಂದು ಕರೆಯುತ್ತಾನೆ. ಮಲ್ಲಿಗೆ ಆತನ ಜೊತೆಗೆ ಹೊರಡುತ್ತಾಳೆ. ಇದನ್ನು ನೋಡಿದ ಊರವರಿಗೆ ಆ ಕಾಮುಕನ ಜೊತೆ ಮಲ್ಲಿಗೆ ಹೋದದ್ದಕ್ಕೆ ಆತಂಕ ಕಾಡುತ್ತದೆ.

ಗೆಳತಿಯರ ಜೊತೆ ಬೆಳೆಯಬೇಕಾಗಿದ್ದ ಹೆಣ್ಣು. ಮಾಂತ್ರಿಕ ವಿದ್ಯೆ ಕಲಿಯುತ್ತಿದ್ದಾಳೆ. ಡಿಗ್ರಿ ಓದಿ ಪಾಸ್ ಮಾಡಿದಷ್ಟು ಸುಲಭ ಅಲ್ಲ ಇದು. ತದೇಕ ಏಕಾಗ್ರತೆ... ಪ್ರಚಂಡ ನೆನಪಿನ ಶಕ್ತಿ ಇರಬೇಕು. ಮುಖ್ಯವಾಗಿ ಸಹನೆ ಬೇಕು. ಕಷ್ಟಗಳನ್ನು ಸಹಿಸಬೇಕು. ಮದಂತ ಕಲಿಸುತ್ತಿದ್ದಾನೆ. ಹಲ್ಲುಗಳು ಉಳಿದುಕೊಂಡಿದ್ದರೆ ಈ ಕೆಲಸವನ್ನು ರುದ್ರನಾಗ ಮಾಡುತ್ತಿದ್ದ. ತನ್ನ ಶಿಷ್ಯ ಮದಂತನಿಂದ ಮಾಂತ್ರಿಕ ವಿದ್ಯೆಯ್ನು ತಂಗಿಯ ಮಗಳಿಗೆ ಕಲಿಸುತ್ತಿದ್ದಾನೆ.

ಅದಕ್ಕೆ ಕಾರಣ ಮದಂತ! ಅವನು ತೆಗೆದುಕೊಂಡಿರುವ ತೀರ್ಮಾನ! ಎಂಥ ಪರಿಸ್ಥಿತಿಯಲ್ಲಿಯೂ ಯಾರ ಮೇಲೂ ಸಹ ನಾನು ಕಲಿತಿರುವ ಮಾಂತ್ರಿಕ ವಿದ್ಯೆಯನ್ನು ಪ್ರಯೋಗ ಮಾಡುವುದಿಲ್ಲ ಎಂಬ ಪ್ರತಿಜ್ಞೆ!

ರುದ್ರನಾಗ ಈ ಕಾರಣದಿಂದ ಮಲ್ಲಿಗೆಗೆ ತನ್ನ ಶಿಷ್ಯನಿಂದ ವಿದ್ಯೆ ಕಲಿಸುತ್ತಿದ್ದ. ಮುಂದೆ ಇದೆ ಸೇಡಿನ ಯುದ್ಧ! ಅಗ್ನಿಪರೀಕ್ಷೆ ಎದುರಾಗಲಿದೆ. ಮಾಂತ್ರಿಕ ವಿದ್ಯೆ ನಿಜವೇ ಅಥವಾ ಸುಳ್ಳೆ ಎಂಬುದನ್ನು ಪರೀಕ್ಷಿಸಲು ತಂಗಿಯ ಗಂಡ ಮನೋಹರ ಹೇಯಕೃತ್ಯ ಮಾಡಿದ್ದ.

ತನ್ನ ಹೆಂಡತಿ ಮಕ್ಕಳ ಮೇಲೆ ರುದ್ರನಾಗನೇ ಕೈಕರಣ ಮಾಡುವಂತೆ ಸನ್ನಿವೇಶ ಸೃಷ್ಟಿಸಿದ್ದ ಮನೋಹರ. ರುದ್ರನಾಗ ತಾನೇ ನಿಂತು ತನ್ನ ಶಿಷ್ಯನಿಂದ ಪ್ರಯೋಗ ಮಾಡಿಸಿದ್ದ. ಅದರ ಪರಿಣಾಮ ಹೆಂಡತಿಮಕ್ಕಳು ಭೀಕರ ರೀತಿಯಲ್ಲಿ ಸತ್ತರು. ಅದಕ್ಕೆ ಈ ರೀತಿ... ಸೇಡು... ಪ್ರತೀಕಾರ.

ಮನೋಹರ ಮತ್ತು ಅರುಂಧತಿಯ ಮಗಳಿಂದಲೇ ಅವರ ಮೇಲೆ ಮಾಂತ್ರಿಕ ವಿದ್ಯೆಯನ್ನು ಪ್ರಯೋಗಿಸುತ್ತಾನೆ. ಅವರು... ಅವರು ಎಲ್ಲಿದ್ದಾರೆ? ಎಲ್ಲೇ ಇದ್ದರೂ ಬರಲೇಬೇಕು ಬಂದೇ ಬರುತ್ತಾರೆ ಎಂಬ ನಂಬಿಕೆ ಇದೆ.

ರುದ್ರನಾಗ ಇವಳನ್ನು ಪ್ರೀತಿಯಿಂದ ಬೆಳೆಸುತ್ತಿಲ್ಲ. ಅವಳಲ್ಲಿ ಕರುಣೆ, ಪ್ರೀತಿ ಮುಂತಾದ ಭಾವನೆಗಳನ್ನು ಬೆಳೆಯಲು ಬಿಡುತ್ತಿಲ್ಲ. ಪ್ರತಿ ತಪ್ಪಿಗೂ ಕ್ರೂರ ಶಿಕ್ಷೆ. ಕನಸು ಕಾಣಲು ಬಿಡುವುದಿಲ್ಲ. ತುಂಬಾ ವಿಭಿನ್ನ ರೀತಿಯಲ್ಲಿ ಬೆಳೆಸುತ್ತಿದ್ದಾನೆ. ಇವಳ ವಿಶ್ವ ಮೋಹಿನಿಯ ಸೌಂದರ್ಯ ಕಂಡು ಬೆರಗಾಗಿ ಹತ್ತಿರ ಬಂದವರಿಗೆ ಇವಳೇ ಬುದ್ಧಿ ಕಲಿಸಿದ್ದಾಳೆ. ಹುಡುಗರನ್ನು ಹತ್ತಿರ ಸೇರಿಸಕೂಡದೆಂಬುದು ರುದ್ರನಾಗನ ಆಜ್ಞೆ.

ಆ ದಿನದ ಅಭ್ಯಾಸ ಮುಗಿದ ಕೂಡಲೇ ಮಲ್ಲಿಗೆ ಮನೆಯ ಕಡೆ ಹೊರಟಳು. ಮನೆಯ ಎಲ್ಲಾ ಕೆಲಸವನ್ನು ಅವಳೇ ಮಾಡಬೇಕು. ಅದರೊಂದಿಗೆ ಮದಂತ ಹೇಳಿಕೊಟ್ಟಿದ್ದನ್ನು ಅಭ್ಯಾಸ ಮಾಡಬೇಕು. ಈಗ ಸ್ಮಶಾನದಲ್ಲಿ ಗುರು ಮಾಂತ್ರಿಕ ರುದ್ರನಾಗ ಮತ್ತು ಮದಂತ ಇದ್ದಾರೆ. ಅವರ ನಡುವೆ ಸಮಾಧಿ ಇದೆ. ಸೂರ್ಯ ಪೂರ್ವದಲ್ಲಿ ಕಾಣುತ್ತಿದ್ದಾನೆ. ಮದಂತ 'ಗುರುಗಳೆ ಪಾತಾಳ ಭೈರವಿಯ ಪ್ರಯೋಗ ಮುಗಿದರೆ ಅಲ್ಲಿಗೆ ಒಂದು ಹಂತ ಮುಗಿಯುತ್ತದೆ. ನೀವು ನನಗೆ ಕಲಿಸಿರುವುದನ್ನೆಲ್ಲಾ ನಾನು ಮಲ್ಲಿಗೆಗೆ ಕಲಿಸಿದ್ದೇನೆ'

'ತುಂಬಾ ಸಂತೋಷ ಮದಂತ'

'ನನಗೆ ಅಪ್ಪಣೆ ಕೊಡುತ್ತೀರ?'

'ಯಾಕೆ?'

'ನಾನು ಈ ಊರಿನಿಂದ ಹೋಗುತ್ತೇನೆ.'

ಗಾಬರಿಯಿಂದ 'ಯಾಕೆ?'

ಮದಂತ ವಿಷಾದದಿಂದ 'ಮುಂದೆ ನಡೆಯಲಿರುವ ಘೋರವನ್ನು ನಾನು ನೋಡಲಾರೆ.'

'ಅಂದರೆ... ಅಂದರೆ...'

ಮದಂತ 'ಮಲ್ಲಿಗೆ ತನ್ನ ತಂದೆತಾಯಿ ಮತ್ತು ರಕ್ತಸಂಬಂಧಿಗಳ ಮೇಲೆ ಕ್ಷುದ್ರ ಶಕ್ತಿಗಳನ್ನು ಪ್ರಯೋಗಿಸುವುದನ್ನು ನಾನು ನೋಡಲಾರೆ.'

ರುದ್ರನಾಗ ಕೋಪದಿಂದ 'ನನ್ನ ಹೆಂಡತಿ, ಮಕ್ಕಳನ್ನು ನನ್ನ ಕೈಯಿಂದಲೇ ಸಾಯುವಂತೆ ಮನೋಹರ ಕುತಂತ್ರ ಹೂಡಿದ್ದ. ಅದನ್ನು ನೀನು ನೋಡಲಿಲ್ಲವೆ?'

ಮದಂತ 'ಮನೋಹರ ತಪ್ಪು ಮಾಡಿದ ನಿಜ. ಆದರೆ ಅದಕ್ಕಾಗಿ ಈ ಹೆಣ್ಣಿನ ಬಾಳನ್ನು ನೀವು ಈ ರೀತಿ ಹಾಳು ಮಾಡಬಾರದಾಗಿತ್ತು.'

ಕೋಪದಿಂದ 'ಮದಂತ...'

ಮದಂತ ಹೆದರದೆ, 'ಅವಳಿಗೆ ಅಕ್ಷರ ಕಲಿಸಲಿಲ್ಲ. ನಾಗರಿಕತೆ ಬಗ್ಗೆ ತಿಳಿಸಲಿಲ್ಲ. ಬುದ್ಧಿ ತಿಳಿದಾಗಲಿಂದ ಅವಳನ್ನು ಪ್ರೇತಪಿಶಾಚಿಗಳ ಜೊತೆ ಬೆಳೆಸುತ್ತಿದ್ದೀರ. ಕೇವಲ ಸೇಡನ್ನು ತೀರಿಸಿಕೊಳ್ಳಲು ಮಲ್ಲಿಗೆಗೆ ಇಂಥ ಶಿಕ್ಷೆ ಕೊಡಬಾರದಿತ್ತು.' ರುದ್ರನಾಗ ಗದರಿಸುತ್ತಾ 'ಬಾಯಿಮುಚ್ಚು ಮದಂತ. ನಿನ್ನ ಉಪದೇಶ ನನಗೆ ಬೇಕಾಗಿಲ್ಲ. ಮಲ್ಲಿಗೆಗೆ ಕಲಿಸಿದ್ದು ಮುಗಿದ ಕೂಡಲೇ ನೀನು ಎಲ್ಲಿಗೆ ಬೇಕಾದರೂ ಹೋಗಬಹುದು' ಎಂದು ಹೇಳಿ ಅಲ್ಲಿಂದ ನಡೆದ.

ಮದಂತ ನಿಟ್ಟುಸಿರು ಬಿಟ್ಟ. ರುದ್ರನಾಗ ಮೊದಲಿನಿಂದಲೂ ಇದೇ ರೀತಿ. ಸ್ವಾರ್ಥ... ಬರೀ ಸ್ವಾರ್ಥ! ಮೊದಲು ದುಡ್ಡಿನ ದಾಹ ಇತ್ತು. ಹೆಂಡತಿ, ಮಕ್ಕಳು ಸತ್ತ ಮೇಲೆ ಸೇಡು ತುಂಬಿದೆ. ರುದ್ರನಾಗನಿಗೆ ಬುದ್ಧಿ ಕಲಿಸುವವರು ಯಾರೂ ಇಲ್ಲವೆ? ರುದ್ರನಾಗ ಈಗ ಹಲ್ಲು ಕಿತ್ತಿರುವ ಹಾವು. ತೀರಾ ಸಾಧಾರಣ ಮಾಂತ್ರಿಕ. ಯಾರು ಬೇಕಾದರೂ ಒಂದೇ ರಾತ್ರಿಯಲ್ಲಿ ರುದ್ರನಾಗನಿಗೆ ಗತಿ ಕಾಣಿಸಬಲ್ಲರು.

ಮದಂತನಿಗೆ ಆಲೋಚನೆ ಬಂದಿತು. ನಾನೇ ಈ ಕೆಲಸ ಮಾಡಲೆ?